REVIEW OF RESEARCH
IMPACT FACTOR : 5.2331 (UIF) UGC APPROVED JOURNAL NO. 48514 ISSN: 2249-894X
VOLUME - 7 | ISSUE - 7 | APRIL - 2018

# ಜಾನಪದ ಕ್ಷೇತ್ರಕ್ಕೆ ಶ್ರೀ ಎಚ್. ಕಾಶಿನಾಥರೆಡ್ಡಿ ಅವರ ಕೊಡುಗೆಗಳು



**Dr. Mallikarjun Bassanna**
**Guest Lecturer, GFGC Jewargi, Kalaburagi, Karnataka.**

## ABSTRACT

ಕರ್ನಾಟಕದ ಕೀರಿಟವೆಂದೆ ಪ್ರಸಿದ್ಧಿ ಪಡೆದಿರುವ ಬೀದರ ಜಿಲ್ಲೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ದೃಷ್ಟಿಯಿಂದ ಮುಂದುವರೆದ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಶಿಷ್ಟ ಹಾಗೂ ಜಾನಪದ ಸಾಹಿತ್ಯಕ್ಕೆ ಕೊರತೆಯೇ ಇಲ್ಲ ಇಂತಹ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಹಣಕುಣಿ ಗ್ರಾಮದಲ್ಲಿ ಜನಿಸಿದ ಶ್ರೀ ಎಚ್.ಕಾಶಿನಾಥ ರೆಡ್ಡಿಯವರು ಸದ್ದಿಲ್ಲದೆ ಸಾಹಿತ್ಯ ಸೇವೆಗೈಯುತ್ತಿದ್ದಾರೆ. ಇವರ ಹಣಿಕುಣಿ ಗ್ರಾಮದಲ್ಲಿ ಮತ್ತು ತಾಲೂಕು, ಜಿಲ್ಲೆಯಲ್ಲಿ ಜನಪದ ಸಂಪತ್ತು ತುಂಬಿ ತುಳುಕುತ್ತಿದೆ.

## INTRODUCTION

ಹಣಕುಣಿ ಗ್ರಾಮವು ಪ್ರಗೈತಿಕ ಇತಿಹಾಸವನ್ನು ಹೊಂದಿದೆ. ಬೀದರ ಜಿಲ್ಲೆಯ ಹೆಬ್ಬಾಗಿಲು ಆಗಿರುವ ಹುಮನಾಬಾದ ತಾಲ್ಲೂಕು ಪ್ರಾಚೀನ ಕಾಲದಲ್ಲಿ ಜಯಸಿಂಹ ನಗರವೆಂದು ಪ್ರಸಿದ್ಧಿಪಡೆದಿತ್ತು. ಚಾಲುಕ್ಯ ದೊರೆ ಎರಡನೇ ಜಯಸಿಂಹನು ಹುಮನಾಬಾದ ನಗರವನ್ನು ಕಟ್ಟಿದನೆಂದು ಹಲವಾರು ಶಾಸನಗಳು ಕಂಡುಬರುತ್ತದೆ. ಈ ನಗರದ ದಕ್ಷಿಣ ಭಾಗದಲ್ಲಿ ಸುಮಾರು ೬ ಕಿ.ಮೀ. ದೂರದಲ್ಲಿರುವ 'ಹಣಕುಣಿ' ಎಂಬ ಪುರಾತನ ಗ್ರಾಮವಿದೆ. ಈ ಗ್ರಾಮವನ್ನು ಜಯಸಿಂಹನ ದ್ರವ್ಯಗಾರವಾಗಿದ್ದು. ವೈರಿಗಳು ರಾಜಧಾನಿಯ ಮೇಲೆ ದಾಳಿಮಾಡಿದರು, ಅವರ ಕೈಗೆ ಸಂಪತ್ತು ದೊರೆಯದಂತೆ ಈ ಗ್ರಾಮವು ನೋಡಿಕೊಳ್ಳುತ್ತಿತ್ತು. ಅದಕ್ಕಾಗಿ ಈ ಗ್ರಾಮಕ್ಕೆ 'ಹಣದ ಕೋಣೆ' ಎಂಬ ಹೆಸರು ಬಂದಿತ್ತು. ಜನರ ಬಾಯಲ್ಲಿ ಈ ಹೆಸರು ಬರುಬರುತ್ತ 'ಹಣಕುಣಿ' ಎಂದು ಬಳಕೆಯಾಗಿದೆ ಇಂತಹ ಐತಿಹಾಸಿಕ ಇತಿಹಾಸವುಳ್ಳ ಗ್ರಾಮದಲ್ಲಿ ಅನೇಕ ಜಾನಪದ ಕವಿ–ಕಲಾವಿದರು ವಿದ್ವಾಂಸರು ಹುಟ್ಟಿ ಬೆಳೆದುಬಂದಿದ್ದಾರೆ.

ಬಯಲಾಟದ "ಸಾರಥಿ–ಪಾತ್ರದ ವೀರಂತಯ್ಯ" ಕಲ್ಮಠ ಪಂಚಯ್ಯ ಸ್ವಾಮಿ ಬಯಲಾಟದ ಮಾಸ್ತರ ಪುಂಡಲಿಕಪ್ಪ ಬಡಿಗೇರ, ಕೋಲಾಟದ ಕಣ್ಮಣಿ ಗುಂಡಪ್ಪಾ ಹಾಸರೆಡ್ಡಿ ರೀವಾಯಿತ ಹಾಡುಗಳ ಕವಿ ಪಾಪರೆಡ್ಡಿ, ಸೋಬಾನೆ ಹಾಡಿನ ಹಾಡುಗಾರ್ತಿ ನಾಗಮ, ಈರಮ್ಮಾ, ಹಾಸ್ಯಗಾರ ಸಾಯಬಣ್ಣ ಅಡ್ಡವೇಪ್ಪದ ಪಾತ್ರದಾರಿ ಸೊಂಗಿನ ಕುಂಬಾರ ಗುರಸಿದ್ದ ಮೊದಲಾದ ಈ ಊರಿನಲ್ಲಿ ಜನಿಸಿದ್ದಾರೆ. ಇಂತಹ ಊರಿನಲ್ಲಿ ಹುಟಿದ ಕಾಶಿನಾಥರೆಡ್ಡಿಯವರು ಬಾಲ್ಯದಲ್ಲಿ ಹಲವಾರು ಕಷ್ಟಗಳ ಮಧ್ಯದಲ್ಲಿ ಬೆಳೆದುಬಂದವರು ಬಾಲ್ಯದಲ್ಲಿ ಗ್ರಾಮೀಣ ಜಾನಪದ ಆಟಗಳಾದ ಚಿಣಿದಾಂಡು ಗೋಲಿಯಾಟ ಕುಂಟಾಟ, ಮರಕೋತಿ ಆಟಗಳು ಹಾಡುತ್ತ ಬೆಳೆದು ಇವರು ೧೦–೧೫ನೇ ವರ್ಷದಲ್ಲಿಯೇ ಬಯಲಾಟ ಮತ್ತು ಸಣ್ಣಾಟಗಳಲ್ಲಿ ಪಾತ್ರದಾರಿಯಾಗಿ ನಟಿಸಿದ್ದಾರೆ.

ಕಾಶಿನಾಥರು ಮೂಲತ ಪ್ರಥಮಿಕ ಶಾಲಾ ಶಿಕ್ಷರಾಗಿ, ಆನಂತರ ಪ್ರೌಢ, ಪದವಿ–ಪೂರ್ವ ಡಿ.ಇಡಿ ಬಿ.ಇಡಿ ಕಾಲೇಜಿನ ಪ್ರಾಂಶುಪಾಲರಾಗಿ ವೃತ್ತಿ ಜೀವನ ಸಾಗಿಸುತ್ತ ಪ್ರವೃತ್ತಿಯಿಂದ ಜಾನಪದ ಕಾರ್ಯಕ್ಷೇತ್ರದ ತಜ್ಞರಾಗಿ, ಜಾನಪದ ಕಲಾ ಸಂಘಟಕರಾಗಿ, ಸಂಪಾದರರಾಗಿ, ಸಂಶೋಧಕರಾಗಿ ಕವಿಗಳಾಗಿ, ಲೇಖಕರಾಗಿ, ಜಾನಪದ ಸಾಹಿತ್ಯಕ್ಕೆ ತಮ್ಮದೆ ಆದ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ.

೧) ಡಾ.ಎಂ.ಎಸ್.ಲಠ್ಠೆಯವರ ಜೊತೆಗೂಡಿ ಜಾನಪದ ಕ್ಷೇತ್ರಕಾರ್ಯ ಮಾಡಿ "ಜಾನಪದ ಕವಿಚರಿತ್ರೆ" ಎಂಬ ಪುಸ್ತಕ ಹೊರಬರುವಲ್ಲಿ ಕಾಶಿನಾಥರೆಡ್ಡಿಯವರು ಕಾರಣರಾಗಿದ್ದಾರೆ (ಇದಕ್ಕೆ ಸಾಕ್ಷಿಯಾಗಿ 'ಜಾನಪದ ಕವಿಚರಿತ್ರೆ ಹಾಗು ಲೇಖನಗಳು ಪ್ರಸ್ತಾವನೆಗಳು ಪುಸ್ತಕದಲ್ಲಿನ ಕೃತಜ್ಞತೆಗಳಲ್ಲಿ ಸ್ವತಃ ಎಂ.ಎಸ್.ಲಠ್ಠೆಯವರೆ ಇವರ ಹೆಸರನ್ನು ಸೂಚಿಸಿ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ).

೨) ದಿವಂಗತ ವಿಠಲರಾವ್ ಕುಲಕರ್ಣಿಯವರಿಗೆ ಸಹಾಯಕರಾಗಿ ಉತ್ತರ ಕರ್ನಾಟಕದ ಸುಮಾರು ೩೨೦ರಕ್ಕೂ ಹೆಚ್ಚು ಶಿಲಾ ಶಾಸನಗಳು ತಾಮ್ರಪತ್ರಗಳ ಸಂಶೋಧಿಸಿದ್ದಾರೆ.

೩) ರಾಷ್ಟ್ರಕೂಟರ ಒಂದನೇ ಗೋವಿಂದನ ತಾಮ್ರ ಪತ್ರವನ್ನು ಸಂಶೋಧಿಸಿ ಅದು ದುಮ್ಮನಸೂರಿನ ವೇದ ಉಪನಿಷತ ಬಲ್ಲ ಬ್ರಾಹ್ಮಣರಿಗೆ ಕೊಟ್ಟ ಧಾನ ಪತ್ರವೆಂದು ಸಂಶೋಧಿಸಿದವರು ಕಾಶಿನಾಥರೆಡ್ಡಿಯವರು.

೪) ಘೋಡವಾಡಿ ಇಸ್ಮಾಂಯಿಲ್ ಖಾದ್ರಿಯು ಮಹಮ್ಮದ ಪೈಗಂಬರ ೩೨ನೇ ಸಂತತಿಯವರೆಂದು ಇವರು ಗುಲಬರ್ಗಾ ಜಿಲ್ಲೆಯ ಶಾಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ಚಹಾದಹುಸೇನಿ ಅವರ ಮೊಮ್ಮಗನೆಂದು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದವರೆ ಕಾಶಿನಾಥರೆಡ್ಡಿಯವರು.

೫) ಎಂ.ಎಸ.ಲಠ್ಠೆಯವರ ಮಾರ್ಗದರ್ಶನದಂತೆ ದುಮ್ಮನಸೂರಿನ ಜಾನಪದ ಕವಿ ಸಂತ ತತ್ವಪದಕಾರಾದ 'ಧುಮ್ಮನಸೂರ ಸಿದ್ದಪ್ರಭು ಮಹಾರಾಜರ' ಸಾವಿರಾರು ಹಾಡುಗಳು ಸಂಗ್ರಹಿಸಿ ಆರಾಧನೆ, ಸಾವಧಾನೆ, ತತ್ವಜ್ಞಾನ, ಅಭಂಗಗಳ ಹಾಗೂ ಸಂಕೀರ್ಣ ಎಂಬ ಐದು ಸಂಪುಟಗಳು ಪ್ರಕಟಿಸಿ ಕನ್ನಡ ಜಾನಪದ ಸಾಹಿತ್ಯಕ್ಕೆ ಅಮೋಘವಾದ ಸೇವೆ ಸಲ್ಲಿಸಿದ್ದಾರೆ.

೬) ಕಾಶಿನಾಥರೆಡ್ಡಿಯವರು ಬೀದರಿನ ಮಾಣಿಕರಾವ ಧನಶ್ರೀಯವರೊಂದಿಗೆ ಕೂಡಿಕೊಂಡು 'ಭಂಗೂರಿ'ನಲ್ಲಿನ ದೊರತ ಡಾ. ಹರ್ಡೆಕರ ಮಂಜಪ್ಪನವರ 'ಜನಸೇವಕನ ವಚನಗಳು' ಎಂದು ಸಾಹಿತ್ಯಕ್ಕೆ ತೋರಿಸಿಕೊಟ್ಟವರು.

೭) ಕಾಶಿನಾಥ ರೆಡ್ಡಿಯವರು ಸಂಪಾದಕರು, ಸಂಶೋಧಕರು, ಕಲಾವಿದರು, ಪತ್ರಕರ್ತರು ಅಲ್ಲದೇ ಅವರೊಬ್ಬರು ಸೃಜನಶೀಲ ಕವಿಗಳು ಲೇಖಕರು ಹೌದು, ಕಾಯಕವೀರ ಮೋಳಿಗಯ್ಯ ಮರಯ್ಯ, ಸಿದ್ಧಪ್ರಭು, ಶ್ರೀ ವೀರಭದ್ರ ದೇವಾಲಯ ಹುಮನಾಬಾದ ತಾಲೂಕನ ಚರಿತ್ರೆ, 'ಕೊರಿಕೆ' ಕವನ ಸಂಕಲನ, ಸಾಹಿತ್ಯ ಸುರಭಿ, ಸಾಹಿತ್ಯ ಸುಧಾ, ಸಾಹಿತ್ಯ ಸಿಂಧು, ಸಾಹಿತ್ಯ ಸುಮ ಮೊದಲಾದ ಕೃತಿಗಳನ್ನು ರಚಿಸದ್ದಾರೆ.

೮) ಶ್ರೀ ಕಾಶಿನಾಥ ರೆಡ್ಡಿಯವರು ಪ್ರಕಾಶಕರಾಗಿಯು ಹಲವಾರು ಪುಸ್ತಕಗಳನ್ನು ಮುದ್ರಿಸಿ ಸಾರಸತ್ವಲೋಕಕ್ಕೆ ಅರ್ಪಿಸಿದ್ದಾರೆ. ಇವರ 'ಬಸವತೀರ್ಥ ಪ್ರಕಾಶನ ವಾಂಜರಾ' ಎಂಬ ಪ್ರಕಾಶಿನದಲ್ಲಿಯ ಹಲವಾರು ಪುಸ್ತಕಗಳು ಪ್ರಕಟವಾಗಿವೆ.

೯) ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಬಿಡುಗಡೆಯಾದ ೩೬ ಸಂಪುಟಗಳಲ್ಲಿ ಆಚರಣೆಯ ಹಾಡುಗಳು ಎಂಬ ಒಂದು ಸಂಪುಟ ಕಾಶಿನಾಥ ರೆಡ್ಡಿಯವರ ಕೊಡುಗೆಯಾಗಿದೆ.

ಕಾಶಿನಾಥ ರೆಡ್ಡಿಯವರು ಹಲವರು ಸಂಘ ಸಂಸ್ಥೆಗಳ ಸದಸ್ಯರಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

೧) ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಆಕಾಡೆಮಿಗೆ ಸದಸ್ಯಸರಾಗಿ.

೨) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ತಾಲ್ಲೂಕ ಮಟ್ಟದ ಸದಸ್ಯರಾಗಿ ಎರಡು ಬಾರಿಗೆ ಸೇವೆ ಸಲ್ಲಿಸಿದ್ದಾರೆ.

೩) ೨೦೧೨ನೇ ಸಾಲಿನ 'ಜಾನಪದ ಜಾತ್ರೆ' ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಗುಲಬರ್ಗಾ ವಿಭಾಗದ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ.

೪) ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಬೀದರ ಜಿಲ್ಲೆಯಿಂದ 'ಭೂತೇಕ ಕುಣಿತ' ಎಂಬ ನೃತ್ಯ ಸಂಯೋಜನೆಯ ಕಲಾ ಸಂಘಟಕರಾಗಿ ಇಡಿ ನಾಡಿಗೆ ಪರಿಚಯಿಸಿದ ಕೀರ್ತಿಗೆ ಪಾತ್ರರಾಗದ್ದಾರೆ.

೫) ಬೆಂಗಳೂರು ಹಾಗೂ ಗುಲಬರ್ಗಾ ಅಕಾಶವಾಣಿಯಲ್ಲಿ ಸಾಹಿತ್ಯಿಕ ಮತ್ತು ಕನ್ನಡ ಕಲೆಗಳ ಕುರಿತು ಕಾರ್ಯಕ್ರಮ ನಿಡಿದ್ದಾರೆ.

ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ಬೀದರ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ, ಆದರ್ಶ ಉಪನ್ಯಾಸಕ, ಬೀದರ ಜಿಲ್ಲೆಮಟ್ಟದ ಕನ್ನಡ ರಾಜೋತ್ಸವ ಪ್ರಶಸ್ತಿ, ಬೀದರಿನ ಕ್ರೈಸ್ತ ಸಮುದಾಯದಿಂದ ವಿಶೇಷ ಬರವಣಿಗೆಗೆ ವಿಶೇಷ ಸೇವೆ ಪ್ರಶ್ತಸಿಯನ್ನು ನೀಡಿ ಗೌರವಿಸಲಾಗಿದೆ.

ಒಟ್ಟಾರೆಯಾಗ ಶ್ರೀ ಎಚ್. ಕಾಶಿನಾಥರೆಡ್ಡಿಯವರು ಸಂಪಾದಕರಾಗ, ಸಂಶೋಧಕರಾಗಿ, ಕವಿಗಳಾಗಿ, ಲೇಖಕರಾಗಿ, ಪತ್ರಿಕ ವರದಿಗಾರರಾಗಿ, ಪ್ರಕಾಶಕರಾಗಿ, ಶಿಕ್ಷಕರಾಗಿ, ಜಾನಪದ ಕಾರ್ಯಕ್ಷೇತ್ರ ತಜ್ಞರಾಗಿ, ಜಾನಪದ ಕಲಾ ಸಂಘಟಕರಾಗಿ ಎಲೆಮರೆಯ ಕಾಯಿಯಂತೆ ಜಾನಪದ ಕ್ಷೇತ್ರಕ್ಕೆ ತಮ್ಮದೆ ಆದ ಅಮೂಲ್ಯವಾದ ಕೊಡುಗೆಗಗಳನ್ನು ನಡಿದ್ದಾರೆ.